‘ನನ್ನ ಸೋಲನ್ನ ನಾನು ಒಪ್ಪಿಕೊಳ್ತೀನಿ... ಆದರೆ ನಾನು ಯಾವತ್ತೂ ಸಂಗೀತವನ್ನು ಇಷ್ಟಪಟ್ಟಿದ್ದೇನೆ, ಈಗಲೂ ಅದನ್ನ ಪ್ರಾಣದಂತೆ ಪ್ರೀತಿಸುತ್ತೇನೆ. ತುಂಬಾ ಅಲ್ಲದಿದ್ದರೂ ಏನಾದರೊಂದಿಷ್ಟು ಸಾಧನೆ ಮಾಡಬಹುದಿತ್ತು...’

‘ಓಹ್, ಅದು ಸಂಗೀತವಲ್ಲ! ಅದು ಆ ಚಣ...’

‘ಇದು ಮನನೋಯಿಸುವ ಮಾತು, ಆಂಡ್ರೆ ಡಿಯರ್... ನಾನೀಗ ವಸತಿ ಶಾಲೆಯೊಂದರಲ್ಲಿ ಡ್ಯಾನ್ಸಿಂಗ್ ಕ್ಲಾಸಿಗೆ ಗತಿಹೀನ ಪಿಯಾನಿಸ್ಟ್. ಅದೂ ನನಗೆ ಒಂಚೂರೂ ಇಷ್ಟವಿರದ ಅದೇ ಆ ದರಿದ್ರ ನಗರದಲ್ಲಿ! ಆದರೂ ಈಗಲೂ ಈ ಚಣದಲ್ಲಿ ಕೂಡಾ, ನನಗೊಂದು ಆಶ್ರಯವನ್ನು ಕೊಡಬಲ್ಲ, ನನಗೊಂದು ಮಗುವನ್ನೂ ನೀಡಬಲ್ಲ, ನನ್ನನ್ನು ಪ್ರೀತಿಸಬಲ್ಲ, ಅಂತೆಯೇ ಗೌರವಿಸಬಲ್ಲ, ನನಗೊಬ್ಬ ಗಂಡಸು ಸಿಗಬಹುದಿತ್ತೇನೋ. ಆದರೆ, ನಮ್ಮ ಪ್ರೀತಿಯ ನೆನಪು...'



ಸ್ಟ್ರೆಶ್ನೆಫ್ ಸಿಗರೇಟೊಂದನ್ನು ಹಚ್ಚಿಕೊಂಡು ಅವಳಿಗೆ ಮೆಲ್ಲಗೆ ಉತ್ತರಿಸುತ್ತಾನೆ:

‘ವಿಯರ, ಸಂಭಾವಿತ ಕುಲದವರಾದ ನಾವು, ಪ್ರೀತಿಯನ್ನು ಹಗುರವಾಗಿ ನೋಡುವಂತಿಲ್ಲ. ಹಾಳಾಗಿ ಹೋಗಿದ್ದು, ನಿನ್ನ ಬದುಕಲ್ಲ, ಅದು ನನ್ನದು. ಹದಿನೈದು ವರ್ಷಗಳ ಹಿಂದೆ ದಿನವೂ ಬಿಡದೆ ನಾನಿಲ್ಲಿಗೆ ಬರುತ್ತಿದ್ದೆ, ನಿನ್ನ ಹೊಸಲಿನಲ್ಲಿ ನನ್ನ ರಾತ್ರಿಗಳನ್ನು ಕಳೆಯಲು ಹವಣಿಸುತ್ತಿದ್ದೆ. ಆಗ ನಾನಿನ್ನೂ ಹರೆಯದ ಹುಡುಗನಾಗಿದ್ದೆ, ಭಾವುಕತೆ, ದಯಾದಾಕ್ಷಿಣ್ಯಗಳು ನನ್ನನ್ನು ದಡ್ಡನನ್ನಾಗಿಸಿದ್ದವು...’

ಅವನ ಸಿಗರೇಟು ನಂದಿಹೋಯ್ತು. ಅವನದನ್ನು ದೂರ ಎಸೆದು, ಕೈಯ್ಯನ್ನು ತನ್ನ ದೇಹದ ಪಕ್ಕಕ್ಕಿಟ್ಟುಕೊಂಡು ಮಾಡನ್ನೇ ನೋಡುತ್ತಿದ್ದ.

‘ನಮ್ಮ ಪೂರ್ವಿಕರ ಪ್ರೇಮಕಥೆಗಳು, ಅಂಡಾಕಾರದ ಫ್ರೇಮಿನೊಳಗಿರುವ ಅವರ ಪಟಗಳು... ಅವನ್ನೆಲ್ಲಾ ಪಾರಂಪರ್ಯವಾಗಿ ಪಡೆಯಲು ನಮಗಲ್ಲದೆ ಇನ್ನಾರ ಹಣೆಯಲ್ಲಿ ಬರೆದಿದೆ ಹೇಳು? ನಾನಾಗ ಕವಿತೆಯೊಂದನ್ನೂ ಬರೆದಿದ್ದೆ:

ಪ್ರೀತಿಸುತ್ತಾ ನಿನ್ನ, ಕನಸಿದ್ದೆ ನಾನು ಕನಸು ಕಂಡವರ
ಪ್ರೀತಿಸಿದ್ದೆವು ನಾವು ಈ ಇಲ್ಲೇ ಶತಮಾನದ ಹಿಂದೆ ಪರಸ್ಪರ.
ಅವರಿಗಾಗಿ ಒಮ್ಮೆ ಮಿನುಗಿದ ಅದೇ ನಕ್ಷತ್ರಗಳಡಿಯಲ್ಲಿ,
ಅಲೆದಿದ್ದೆ ನಾನು ಎಲ್ಲೆಂದರಲ್ಲಿ ನಿನದೇ ಧ್ಯಾನದಲ್ಲಿ...’

ಅವನು ವಿಯರಳನ್ನೇ ದಿಟ್ಟಿಸಿದ. ಅವನ ದನಿ ಗಡುಸಿಗೆ ತಿರುಗಿತು.